ಇ) ಮಾಸಿಕ ರೂ. 1000/

ಸದರಿ ಮಾಸಿಕ ವೇತನವನ್ನು ರೂ.1000/ದಿಂದರೂ.2000/ಕ್ಕೆ ಹೆಚ್ಚಿಸಲು ತೀರ್ಮಾನಿಸಲಾಗಿದೆ.

ಈ) ಗ್ರಾಮಸಹಾಯಕರ ಸೇವೆಯನ್ನು ಖಾಯಂಗೊಳಿಸಲು ಸರ್ಕಾರ ವು ತೀರ್ಮಾನ ತೆಗೆದುಕೊಂಡಿರುವುದಿಲ್ಲ.

ಉ) ಹೌದು.

5763 (6646) ಶ್ರೀ ಧರ್ಮೇಗೌಡ ಎಸ್. ಎಲ್. (ಬೀರೂರು): ಮಾನ್ಯ ವಸತಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ವಿವಿಧ ವಸತಿ ಯೋಜನೆಯಲ್ಲಿ ಇದುವರೆವಿಗೆ ಎಷ್ಟು ಮನೆಗಳನ್ನು ಯಾವ ಯಾವ ಯೋಜನೆಯಡಿಯಲ್ಲಿ ನಿರ್ಮಿಸಲಾಗಿದೆ ? (ವಿವರ ನೀಡುವುದು):

ಆ) ಮನೆಗಳನ್ನು ನಿರ್ಮಿಸಲು ಎಲ್ಲಾ ಯೋಜನೆಗಳಲ್ಲೂ ಸಾಕಷ್ಟು ಅನುದಾನ ಲಭ್ಯವಿದೆಯೇ ? ಇಲ್ಲದಿದ್ದಲ್ಲಿ, ಯಾವ ಯೋಜನೆಗೆ ಎಷ್ಟು ಕೊರತೆ ಇದೆ (ವಿವರ ನೀಡುವುದು):

ಇ) ಬೀರೂರು ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಒಂದು ವರ್ಷದಿಂದೀಚೆಗೆ ನಿರ್ಮಿಸಿದ ಮನೆಗಳ ಸಂಖ್ಯೆ ಎಷ್ಟು :

ಶ್ರೀ ಅಂಜನ ಮೂರ್ತಿ, (ವಸತಿ ಸಚಿವರು)

ಅ) <u>ರಾಜ್ಯ ಸರ್ಕಾರದ ವಸತಿ ಯೋಜನೆಗಳು</u>

ರಾಜ್ಯ ಸರ್ಕಾರವು ಆಡಳಿತಕ್ಕೆ ಬಂದ ಮೇಲೆ ಅಂದರೆ 2004–05 ಮತ್ತು 2005–06ರಲ್ಲಿ ಇದುವರೆಗೆ ವಸತಿ ಯೋಜನೆಗಳಡಿಯಲ್ಲಿ ರಾಜ್ಯ ಸರ್ಕಾರದಿಂದ ಗುರಿಯನ್ನು ನೀಡಿರುವುದಿಲ್ಲ. ಆದರೆ ಹಿಂದಿನ ಶ್ರೇಣಿಯ ಬಾಕಿ ಇರುವ ಮನೆಗಳನ್ನು ಪೂರ್ಣಗೊಳಿಸಲಾಗುತ್ತಿದ್ದು ಅವುಗಳ ವಿವರ ಈ ಕೆಳಗಿನಂತೆ ನೀಡಲಾಗಿದೆ.

ಆದರೆ 2004–05ರಲ್ಲಿ ಹಿಂದಿನ ಶ್ರೇಣಿಯ 1,00,337 ಬ್ಯಾಕ್‌ಲಾಗ್ ಮನೆಗಳ ಗುರಿಯ ಎದುರಾಗಿ 1,08,691 ಮನೆಗಳನ್ನು ಪೂರ್ತಿಗೊಳಿಸಲಾಗಿದೆ.

2005–06ರಲ್ಲಿ 1,25,000 ಬ್ಯಾಕ್‌ಲಾಗ್ ಮನೆಗಳನ್ನು ಪೂರ್ತಿಗೊಳಿಸುವ ಗುರಿಯನ್ನು ಹೊಂದಿದ್ದು, ಏಪ್ರಿಲ್ ಮತ್ತು ಮೇ 2005ರಲ್ಲಿ 12,333 ಮನೆಗಳನ್ನು ಪೂರ್ಣಗೊಳಿಸಲಾಗಿದೆ.

<u>ಕೇಂದ್ರ ಸರಕಾರ ಪುರಸ್ಕೃತ ವಸತಿ ಯೋಜನೆಗಳು</u>

ರಾಜ್ಯ ಸರಕಾರವು ಆಡಳಿತಕ್ಕೆ ಬಂದ ಮೇಲೆ ಸರ್ಕಾರ ಪುರಸ್ಕೃತ ಇಂದಿರಾ ಆವಾಸ್ ಯೋಜನೆ ಹಾಗೂ ಪಿಎಮ್‌ಜಿವೈ ಯೋಜನೆಯಡಿ 2004–05 ಮತ್ತು 2005–06ರಲ್ಲಿ ಈ ಕೆಳಗಿನಂತೆ ಮನೆಗಳನ್ನು ನಿರ್ಮಿಸಲಾಗಿದೆ.

ವರ್ಷ 2004-05

ಯೋಜನೆ	ಮಂಜೂರಾದ ಮನೆಗಳು	ಪೂರ್ಣಗೊಂಡ ಮನೆಗಳು
ಇಂದಿರಾ ಆವಾಸ್ ಯೋಜನೆ	59529	50707
ಪಿ.ಎಮ್.ಜಿ.ವೈ ಯೋಜನೆ	8100	7381
ಒಟ್ಟು	**67629**	**58088**

ವರ್ಷ 2005-06

ಯೋಜನೆ	ಮಂಜೂರಾದ ಮನೆಗಳು	ಪೂರ್ಣಗೊಂಡ ಮನೆಗಳು (01-06-2005ರಲ್ಲಿದ್ದಂತೆ)
ಇಂದಿರಾ ಆವಾಸ್ ಯೋಜನೆ ಪಿ.ಎಮ್.ಜಿ.ವೈ ಯೋಜನೆ	52848	2823
ಕೇಂದ್ರ ಸರಕಾರವು 2005-06ರಿಂದ ಈ ಯೋಜನೆಯನ್ನು ಕೈಬಿಟ್ಟಿದೆ.		
ಒಟ್ಟು	**52848**	**2823**

ಆ) 2004-05ರಲ್ಲಿ ಹೊಸ ಗುರಿ ನೀಡಿಲ್ಲ ಮತ್ತು 2005-06ರಲ್ಲಿ ಇದುವರೆಗೆ ಗುರಿ ನೀಡಿಲ್ಲ. ದಿನಾಂಕ:10-4-2005ರಲ್ಲಿದ್ದಂತೆ ರಾಜ್ಯ ಸರ್ಕಾರದ ಯೋಜನೆಗಳ ಹಿಂದಿನ ಶ್ರೇಣಿಯ 2,75,802 ಮನೆಗಳನ್ನು ಕಟ್ಟಬೇಕಿದ್ದು, ಅದಕ್ಕೆ ಯೋಜನಾವರು ಬೇಕಾದ ಹಣ, ಆಯವ್ಯಯದಲ್ಲಿ ಒಸಗಿಸಿರುವ ಹಣ ಮತ್ತು ಕೊರತೆ ಇವುಗಳನ್ನು ಅನುಬಂಧ ಅ ದಲ್ಲಿ ನೀಡಿದೆ. ಇನ್ನುಳಿದಂತೆ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ 2005-06ರಲ್ಲಿ ರಾಜ್ಯ ಸರಕಾರವು ರೂ. 3302.93 ಲಕ್ಷಗಳನ್ನು ನೀಡಬೇಕಿದ್ದು, ಆಯವ್ಯಯದಲ್ಲಿ ರೂ.2746.70 ಲಕ್ಷವನ್ನು ಒದಗಿಸಿದ್ದು, ರೂ. 558.23 ಲಕ್ಷಗಳನ್ನು ಇನ್ನೂ ಒದಗಿಸಬೇಕಿದೆ.

ಇ) ಬೀರೂರು ವಿಧಾನ ಸಭಾ ಕ್ಷೇತ್ರಕ್ಕೆ ಕಳೆದ ಒಂದು ವರ್ಷದಿಂದೀಚೆಗೆ ಒಟ್ಟು 249 ಮನೆಗಳನ್ನು ನಿರ್ಮಿಸಲಾಗಿದೆ.

ಅನುಬಂಧ – ಅ

ರೂ. ಲಕ್ಷಗಳಲ್ಲಿ.

ಯೋಜನೆ	1.04.2004 ರಲ್ಲಿದ್ದಂತೆ ಬೇಕಾದ ಹಣ			2005-06ರ ಆಯವ್ಯಯದಲ್ಲಿ ಒದಗಿಸಿದ ಹಣ		ಕೊರತೆ			
ಯೋಜನೆ	ಪಸರ ಇಲಾಖೆಯಿಂದ ಬರಬೇಕಾದ ಹಣ	ನಮ್ಮಾದ ಕ್ಯಾಂಪ್ ಇಲಾಖೆಯಿಂದ ಬರಬೇಕಾದ ಹಣ	ಒಟ್ಟು	ಪಸರ ಇಲಾಖೆಯಿಂದ ಬರಬೇಕಾದ ಹಣ	ನಮ್ಮಾದ ಕ್ಯಾಂಪ್ ಇಲಾಖೆಯಿಂದ ಬರಬೇಕಾದ ಹಣ	ಒಟ್ಟು	ಪಸರ ಇಲಾಖೆಯಿಂದ ಬರಬೇಕಾದ ಹಣ	ನಮ್ಮಾದ ಕ್ಯಾಂಪ್ ಇಲಾಖೆಯಿಂದ ಬರಬೇಕಾದ ಹಣ	ಒಟ್ಟು
ಗ್ರಾಮೀಣ ಆಶ್ರಯ	2156 4.54	7116. 94	2868 1.48	10061. 84	5000	1506 1.84	1150 2.7	2116 .94	1361 9.64